# ಪಠ್ಯಪೂರಕ ಅಧ್ಯಯನ 5 – ಜನಪದ ಒಗಟುಗಳು

ಜನಪದ ಸಾಹಿತ್ಯ ಜನರ ಮನದ ಭಾವನೆಗಳ ಅಭಿವ್ಯಕ್ತಿ ಮಾಧ್ಯಮವಾಗಿದೆ. ಅದರಲ್ಲೂ ಒಗಟುಗಳನ್ನು ಕಟ್ಟುವ ಕಲೆ ಜನಪದರಿಗೆ ಕರತಲಮಲಕವಾದದ್ದು. ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. ಉತ್ತರ ಕಂಡುಕೊಳ್ಳಲು ಮನಸ್ಸು ವಿವಿಧ ರೀತಿಯಲ್ಲಿ ಆಲೋಚಿಸುತ್ತದೆ. ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.



ಉದಾಹರಣೆಗೆ ಅಂಗಿಯನ್ನು ಒಗಟಿನಲ್ಲಿ ಹೇಗೆ ಬಣ್ಣಿಸಿದ್ದಾರೆಂದರೆ,

ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ<br>
ಮೈಯೊಳಗೆ ನವಗಾಯ ಒಂಬತ್ತು ತುಂಡ<br>
ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ<br>
ರಾಯ ರಾಯರಿಗೆಲ್ಲ ತಾನೇ ಪ್ರಚಂಡ ಎಂದು ಬಣ್ಣಿಸಿರುವುದು ಅವರ ಪ್ರಚಂಡ ಚಾತುರ್ಯವನ್ನು ಅರಿಯಬಹುದು.



ತಿನ್ನುವ ಉಪ್ಪನ್ನು ಕುರಿತು ಬಹಳ ಸೊಗಸಾಗಿ ಅಭಿವ್ಯಕ್ತವಾಗಿದೆ. ಉಪ್ಪು ಮಾನವರ ರುಚಿಗೆ ಅಗತ್ಯವಾದದ್ದು ಅದಕ್ಕಿಂತ ರುಚಿ ಯಾವುದಿಲ್ಲ. ಅದು ಸಮುದ್ರದ ನೀರಿನಲ್ಲಿ ಹುಟ್ಟುತ್ತದೆ. ಪುನಹ ಅದಕ್ಕೆ ನೀರು ತಾಗಿಸಿದರೆ ಕರಗಿ ಮಾಯ ಆಗಿ ನೀರಿನಲ್ಲಿ ಬೆರೆತು ಹೋಗುತ್ತದೆ. ಆದ್ದರಿಂದ ಜನಪದರು **'ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು ನೀರು ತಾಕಿದರೆ ಮಟಮಾಯ'** ಎಂದು ಒಗಟಿನಲ್ಲಿ ಅದರ ವಿಶೇಷತೆ ವ್ಯಕ್ತಪಡಿಸಿದ್ದಾರೆ.



ಕಮಲ ಕೆಸರಲ್ಲಿ ಹುಟ್ಟಿ ಕೆಸರಲ್ಲಿ ಬೆಳೆಯೋದು ಕೆಸರಿಲ್ಲದಿದ್ದರೆ ಕಮಲವೆಲ್ಲಿ , ಕೆಸರೇ ಕಮಲಕ್ಕೆ ಜೀವ ಆದ್ದರಿಂದ ಕೆಸರಿಗೂ ಕಮಲಕ್ಕೂ ತಾಯಿ ಮಗುವಿನ ಸಂಬಂಧ ಇದೆ ಎಂದು ಒಗಟು ವಿವರಿಸುತ್ತದೆ.



ಜನಪದರು ಮುಖ್ಯವಾಗಿ ಹೊಲಗದ್ದೆಗಳಲ್ಲಿ ಕೆಲಸಮಾಡುವಾಗ ಉತ್ತರಾಣಿ ಗಿಡ ನೋಡಿ, ಉತ್ತರಾಣಿ ಎಂಬ ಗಿಡ ಹೊಲದ ಬದುವಿನಲ್ಲಿ ಹುಟ್ಟುತ್ತದೆ. ಆ ಬದುವಿನಲ್ಲಿ ಓಡಾಡುವವರ ಬಟ್ಟೆಯನ್ನು ಅದರಲ್ಲಿ ಮುಳ್ಳುಗಳು ಹಿಡಿಯುತ್ತವೆ. ಆದ್ದರಿಂದ **ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮುಂಚೆರಗ ಹಿಡಿಯೋದು–** ಉತ್ತರಾಣಿಗಿಡ ಎಂದು ಒಗಟನ್ನು ಸೃಷ್ಟಿಸಿದ್ದಾರೆ.



ಅದೇ ರೀತಿ ಗರಕೆಯ ಹುಲ್ಲು ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆದು , ಬೆಳೆಗಳಿಗೆ ಅಡ್ಡಿ ಮಾಡುತ್ತದೆ. ಅಂತಹ ಹುಲ್ಲು ಉಳುವಾನ ( ರೈತನ) ಕಂಡು ನಗುವುದು ಎಂದು ಒಗಟಿನಲ್ಲಿ ವಿವರಿಸಲಾಗಿದೆ.



ಧಾನ್ಯಗಳನ್ನು ಬೀಸುವ ಕಲ್ಲನ್ನು ಕುರಿತು "ಬಗಲಲ್ಲಿ ಕಕ್ಕುವುದು ಬಾಯಲ್ಲಿ ತಿಂಬೂದು ನಂಗ್ಹೇಳಿ ಅರ್ತು ಈ ಹಾಡಿನ – ಹೇಳ್ದಿರೆ ಕೈಗೆ ಹಲ್ಮುರ್ದು ಕೊಡುವೆನು"ಎಂದು ಎದುರಾಳಿಗೆ ಉತ್ತರಿಸಲು ಸವಾಲು ಹಾಕುವುದು ವಿಶೇಷವಾಗಿದೆ.

ಇಂತಹ ಒಗಟುಗಳಿಂದ ನಮ್ಮ ಜನಪದ ಸಾಹಿತ್ಯ ಸಮೃದ್ಧವಾಗಿದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು–ಎರಡು ವಾಕ್ಯಗಳಲ್ಲಿ ಉತ್ತರಿಸಿ.**

1. **'ಅಂಗಿ' ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.**

**ಉತ್ತರ :** ಕೈಯುಂಟು ಕಾಲಿಲ್ಲ ಶಿರಹರಿದ ಮುಂಡ
ಮೈಯೊಳಗೆ ನವಗಾಯ ಒಂಬತ್ತು ತುಂಡ
ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ
ರಾಯ ರಾಯರಿಗೆಲ್ಲ ತಾನೇ ಪ್ರಚಂಡ

2. **ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ?**

**ಉತ್ತರ :** ಉಪ್ಪು ಮಾನವರ ರುಚಿಗೆ ಅಗತ್ಯವಾದದ್ದು ಅದಕ್ಕಿಂತ ರುಚಿ ಯಾವುದಿಲ್ಲ. ಅದು ಸಮುದ್ರದ ನೀರಿನಲ್ಲಿ ಹುಟ್ಟುತ್ತದೆ. ಪುನಹ ಅದಕ್ಕೆ ನೀರು ತಾಗಿಸಿದರೆ ಕರಗಿ ಮಾಯ ಆಗಿ ನೀರಿನಲ್ಲಿ ಬೆರೆತು ಹೋಗುತ್ತದೆ. ಆದ್ದರಿಂದ ಜನಪದರ **'ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು ನೀರು ತಾಕಿದರೆ ಮಟಮಾಯ'** ಎಂಬ ಒಗಟಿನಲ್ಲಿ ಅದರ ವಿಶೇಷತೆ ವ್ಯಕ್ತವಾಗಿದೆ.

3. **ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ ?**

**ಉತ್ತರ :** ಕಮಲ ಕೆಸರಲ್ಲಿ ಹುಟ್ಟಿ ಕೆಸರಲ್ಲಿ ಬೆಳೆಯೋದು ಕೆಸರಿಲ್ಲದಿದ್ದರೆ ಕಮಲವೆಲ್ಲಿ , ಕೆಸರೇ ಕಮಲಕ್ಕೆ ಜೀವ ಆದ್ದರಿಂದ ಕೆಸರಿಗೂ ಕಮಲಕ್ಕೂ ತಾಯಿ ಮಗುವಿನ ಸಂಬಂಧ ಇದೆ ಎಂದು ಒಗಟು ವಿವರಿಸುತ್ತದೆ.

4. **ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ ?**

**ಉತ್ತರ :** ಉತ್ತರಾಣಿ ಎಂಬ ಗಿಡ ಹೊಲದ ಬದುವಿನಲ್ಲಿ ಹುಟ್ಟುತ್ತದೆ. ಆ ಬದುವಿನಲ್ಲಿ ಓಡಾಡುವವರ ಬಟ್ಟೆಯನ್ನು ಅದರಲ್ಲಿ ಮುಳ್ಳುಗಳು ಹಿಡಿಯುತ್ತವೆ. ಆದ್ದರಿಂದ ಜನಪದರು ಬದಿನಲ್ಲಿ ಹುಟ್ಟೋದು ಬದಿನಲ್ಲಿ ಬೆಳೆಯೋದು ಹೋಗೋರ ಮುಂಜೆರಗ ಹಿಡಿಯೋದು – ಉತ್ತರಾಣಿಗಿಡ ಎಂದು ಹೇಳಿದ್ದಾರೆ. ಅದೇ ರೀತಿ ಗರಕೆಯ ಹುಲ್ಲು ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆಯೋದು , ಬೆಳೆಗಳಿಗೆ ಅಡ್ಡಿ ಮಾಡುತ್ತದೆ. ಅಂತಹ ಹುಲ್ಲು ಉಳುವಾನ (ರೈತನ) ಕಂಡು ನಗುವುದು ಎಂದು ಒಗಟಿನಲ್ಲಿ ವಿವರಿಸಲಾಗಿದೆ.

5. **ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?**

**ಉತ್ತರ :** ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. ಉತ್ತರ ಕಂಡುಕೊಳ್ಳಲು ಮನಸ್ಸು ವಿವಿಧ ರೀತಿಯಲ್ಲಿ ಆಲೋಚಿಸುತ್ತದೆ. ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

**6. ಬೀಸುವಕಲ್ಲಿನ ವಿಶೇಷತೆ ಜನಪದರ ಒಗಟಿನಲ್ಲಿ ಹೇಗೆ ಮೂಡಿಬಂದಿದೆ ?**

**ಉತ್ತರ** :ಬೀಸುವ ಕಲ್ಲನ್ನು ಕುರಿತು"ಬಗಲಲ್ಲಿ ಕಕ್ಕುವುದು ಬಾಯಲ್ಲಿ ತಿಂಬೂದು  ನಂಗ್ಹೇಳಿ ಅರ್ತು ಈ ಹಾಡಿನ – ಹೇಳ್ದಿರೆ ಕೈಗೆ ಹಲ್ಮುರ್ದು ಕೊಡುವೆನು"ಎಂದು ಎದುರಾಳಿಗೆ ಉತ್ತರಿಸಲು ಸವಾಲು ಹಾಕುವುದು ವಿಶೇಷವಾಗಿದೆ.